ಮೂಲ ದಾವಾ ನಂಃ 22/2015

ಡಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **12-01-2024** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಜಿ.ಪಿ.ಹೆಚ್ ವಕೀಲರಿಂದಃ**

ರಾಮಾ ಈಶ್ವರ ಹೆಗಡೆ ನನ್ನ ತಂದೆ. ರಾಮಾ ಈಶ್ವರ ಹೆಗಡೆ ರವರಿಗೆ 1 ನೇ ವಾದಿ ಹಾಗೂ 3 ನೇ ಪ್ರತಿವಾದಿ ಮತ್ತು ಮೃತ ಗಣಪತಿ ರವರು ಗಂಡು ಮಕ್ಕಳು. ದಾವೆ ಮಾಡಿದ ನಂತರ 1 ನೇ ವಾದಿಯು ತೀರಿಕೊಂಡಿದ್ದಾರೆ . ಗಣಪತಿ ರವರು ದಾವೆ ಮಾಡುವ ಪೂರ್ವದಲ್ಲಿಯೇ ತೀರಿಕೊಂಡಿದ್ದಾರೆ. ನನ್ನ ತಂದೆ ತೀರಿಕೊಂಡ ನಂತರ ಗಣಪತಿ ಮತ್ತು 1 ನೇ ವಾದಿಯು ತೀರಿಕೊಂಡಿದ್ದಾರೆ. ಪ್ರಭಾವತಿ ಹಾಗೂ ಉಷಾ ಮತ್ತು ಸಂತೋಷ ರವರು ಗಣಪತಿರವರ ಕುಟುಂಬಸ್ಥರಾಗಿದ್ದಾರೆ. ಗಣಪತಿ ರವರ ಕುಟುಂಬಸ್ಥರು ಸಿದ್ದಾಪುರದಲ್ಲಿ ವಾಸ್ತವ್ಯವಿದ್ದು, ಅವಾಗವಾಗ ಹೋಗಿ ಬಂದು ಮಾಡುತ್ತಾರೆ. ಗಣಪತಿಯು ಜೀವಂತ ಇರುವ ಕಾಲದಿಂದಲೂ ಅವರು ಸಿದ್ದಾಪುರದಲ್ಲಿಯೇ ವಾಸ್ತವಾಗಿದ್ದಾರೆ. ಗಣಪತಿಯು ಸಿದ್ದಾಪುರದಲ್ಲಿ 30-35 ವರ್ಷದಿಂದ ಅಂಗಡಿಯನ್ನು ನಡೆಸುತ್ತಿದ್ದನು. ನಮಗೆ ತೊಂದರೆ ಇದ್ದಾಗ ಗಣಪತಿಯು ಅವನ ಅಂಗಡಿಯ ಉತ್ಪನ್ನದ ಆದಾಯವನ್ನು ಕೊಡುತ್ತಿದ್ದನು. ನಾವು ಅವನಿಗೆ ಸದರಿ ಉತ್ಪನ್ನದ ಆದಾಯನ್ನು ವಾಪಸ್ಸು ಕೊಟ್ಟಿದ್ದು ಇರುವುದಿಲ್ಲ. ಅವನು ಕೊಡುತ್ತಿದ್ದ ಆದಾಯದ ಬಗ್ಗೆ ನಾನು ಲೆಕ್ಕಪತ್ರವನ್ನು ಇಟ್ಟುಕೊಂಡಿದಿರುವುದಿಲ್ಲ. ಅವನು ಸಾಯುವವರೆಗೂ ನಮಗೆ ಎಷ್ಟು ಹಣ ಕೊಟ್ಟಿದ್ದಾನೆ ಎಂಬ ಬಗ್ಗೆ ನಾನು ಲೆಕ್ಕ ಪತ್ರವನ್ನು ಇಟ್ಟುಕೊಂಡಿಲ್ಲ.

ಗಣಪತಿಯು ತೀರಿಕೊಂಡ ನಂತರ ಸದರಿ ಅಂಗಡಿಯನ್ನು ಬಾಡಿಗೆಗಾಗಿ ಕೊಟ್ಟಿದ್ದಾರೆ , ಹಾಗೂ ಅವರು ಬಾಡಿಗೆ ಮನೆಯನ್ನು ಮಾಡಿಕೊಂಡು ವಾಸ ಮಾಡುತ್ತಿದ್ದಾರೆ. ಗಣಪತಿಯ ಮರಣದ ನಂತರ ಪ್ರಭಾವತಿ ಅವರು ನನಗೆ ಹಣವನ್ನು ನೀಡಿದ್ದು ಇರುವುದಿಲ್ಲ. ಅದೇ ರೀತಿ ಪ್ರಭಾವತಿ ಅವರು ನನ್ನಿಂದ ಹಣವನ್ನು ಪಡೆದುಕೊಂಡಿದ್ದು ಇರುವುದಿಲ್ಲ. 1 ನೇ ವಾದಿಯ ಕುಟುಂಬಸ್ಥರು ಯಲ್ಲಾಪುರದಲ್ಲಿ ವಾಸ್ತವ್ಯವಾಗಿದ್ದಾರೆ. 1 ನೇ ವಾದಿಯ ಮಗ ಬಿ.ಇ.ಓ ಆಗಿದ್ದಾರೆ , ಹಾಗೂ ಆತನ ಮಗನ ಹೆಂಡತಿಯು ಟೀಚರ್ ಆಗಿದ್ದಾರೆ. ಅವರು ಯಲ್ಲಾಪುರಕ್ಕೆ ಹೋಗಿ ವಾಸ್ತವ್ಯವಾಗಿ ಅಂದಾಜು 10-12 ವರ್ಷದ ಮೇಲಾಯಿತು. 1 ನೇ ವಾದಿಯು ತೀರಿಕೊಳ್ಳುವ ಮೊದಲೇ ಅವರೆಲ್ಲ ಯಲ್ಲಾಪುರಕ್ಕೆ ಹೋಗಿ ವಾಸವಾಗಿದ್ದು, ಅವಾಗ ಅವಾಗ ಹೋಗಿ ಬಂದು ಮಾಡುತ್ತಿದ್ದರು. 1 ನೇ ವಾದಿಯು ತಾನು ಸಾಯುವ 7-8 ವರ್ಷದ ಮೊದಲು ಅವನ ಮಗನೊಂದಿಗೆ ಹೋಗಿ ಯಲ್ಲಾಪುರದಲ್ಲಿ ವಾಸವಾಗಿದ್ದಾನೆ.

ನಮಗೆ ಒಟ್ಟು 5 ಜನ ಸಹೋದರಿಯರು ಇದ್ದಾರೆ. ಈಗ ನಮ್ಮ ಸಹೋದರಿಯರಲ್ಲಿ 2 ನೇ ಪ್ರತಿವಾದಿಯು ತೀರಿಕೊಂಡಿದ್ದಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.